ಧನಸಹಾಯ, ಚಿತ್ರಕಲಾ ಪ್ರದರ್ಶನಕ್ಕೆ ಪ್ರೋತ್ಸಾಹ, ಸಾಹಿತಿಗಳಿಗೆ ಪ್ರಕಟಿತ ಗ್ರಂಥಗಳಿಗೆ ಧನಸಹಾಯ, ಹಸ್ತ ಪ್ರತಿ ಮುದ್ರಣಕ್ಕೆ ಧನಸಹಾಯ ನೀಡಲಾಗುತ್ತಿದೆ.

ಜ್ಞಾನಭಾರತಿ ಆವರಣದಲ್ಲಿ ಕಲಾಗ್ರಾಮ

1349(917); ಶ್ರೀ ಅಶೋಕ್ ಆರ್. [ಪದ್ಮನಾಭನಗರ]

ಅ) ಬೆಂಗಳೂರಿನ ಜ್ಞಾನಭಾರತಿ ಆವರಣದಲ್ಲಿ ಕಲಾಗ್ರಾಮವನ್ನು ನಿರ್ಮಿಸಿದ ಉದ್ದೇಶವೇನು;

ಆ) ಈ ಉದ್ದೇಶಕ್ಕೆ ಮಾತ್ರ ಕಲಾಗ್ರಾಮವನ್ನು ಬಳಸಲಾಗುತ್ತಿದೆಯೇ; ಇತರೆ ಉದ್ದೇಶಗಳಿಗೂ ಬಳಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಕಾರಣವೇನು;

ಇ) ಕಲಾಗ್ರಾಮವು ರುದ್ರಭೂಮಿಯಾಗಿ ಪರಿವರ್ತನೆಯಾಗುತ್ತಿರುವುದು ನಿಜವೇ; ಇಲ್ಲಿ ಎಷ್ಟು ಜನರ ಸಮಾಧಿ ಮಾಡಲಾಗಿದೆ;

ಈ) ಈ ಸಮಾಧಿಗಳು ಕನಿಷ್ಠ ನಾಮ ಫಲಕಗಳೂ ಇಲ್ಲದೇ ಅನಾಥವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಕಲಾಗ್ರಾಮವನ್ನು ಕಲಾ ಚಟುವಟಿಕೆಗಳಿಗೆ ಮಾತ್ರವೇ ಬಳಿಸಿಕೊಳ್ಳುವ ವಿಚಾರಕ್ಕೆ ಸಂಬಂಧಪಟ್ಟಂತೆ ಸರ್ಕಾರದ ನಿಲುವೇನು?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ)

- ವಿವಿಧತೆಯಲ್ಲಿ ಏಕತೆ ಸಾಧಿಸಿದ ನಾಡು ನಮ್ಮದು.
- ನಾಡಿನ ಎಲ್ಲಾ ಜಿಲ್ಲೆಗಳ ವೈವಿಧ್ಯಮಯವಾದ ಸಾಂಸ್ಕೃತಿಕ ಕಲಾ ಸಿರಿಯನ್ನು ಪ್ರೋತ್ಸಾಹಿಸಿ, ಬೆಳೆಸುವ ಹಾಗೂ ಬಿಂಬಿಸುವ ಉದ್ದೇಶಕ್ಕಾಗಿ ಸದರಿ ಕಲಾಗ್ರಾಮವನ್ನು ನಿರ್ಮಿಸಲಾಗಿದೆ.

ಆ)

- ವೈವಿಧ್ಯಮಯವಾದ ಸಾಂಸ್ಕೃತಿಕ ಕಲಾ ಸಿರಿಯ ಅಭಿವೃದ್ಧಿಗಾಗಿ ಮಾತ್ರ ಸದರಿ ಕಲಾಗ್ರಾಮವನ್ನು ಬಳಸಲಾಗುತ್ತಿದೆ.

ಇ)

- ಕಲಾಗ್ರಾಮ ರುದ್ರಭೂಮಿಯಾಗಿ ಪರಿವರ್ತನೆಯಾಗಿಲ್ಲ,
- ಕಲಾಗ್ರಾಮದಲ್ಲಿ ರಾಷ್ಟ್ರ ಕವಿಗಳಾದ ಡಾ॥ ಜಿ.ಎಸ್. ಶಿವರುದ್ರಪ್ಪ ಹಾಗೂ ಜ್ಞಾನಪೀಠ ಪುರಸ್ಕೃತ ಸಾಹಿತಿ ಡಾ॥ ಯು.ಆರ್. ಅನಂತಮೂರ್ತಿಯವರ ಅಂತ್ಯ ಸಂಸ್ಕಾರವನ್ನು ಮಾತ್ರ ಮಾಡಲಾಗಿದೆ.

ಇ)

- ಉದ್ಭವಿಸುವುದಿಲ್ಲ.

ಈ)

- ಈ ಕಲಾಗ್ರಾಮದಲ್ಲಿ ಸಮಗ್ರ ಕನ್ನಡ ನಾಡಿನ ಕಲೆ ಸಂಸ್ಕೃತಿಯನ್ನು ಪ್ರತಿನಿಧಿಸುವ ಯೋಜನೆಗಳನ್ನು ರೂಪಿಸಿ ಸಾಂಸ್ಕೃತಿಕ ಚಟುವಟಿಕೆಯ ವಾತಾವರಣವನ್ನು ನಿರ್ಮಿಸುವುದು ಸರ್ಕಾರದ ಆಶಯವಾಗಿರುತ್ತದೆ.

ರಾಜ್ಯದಲ್ಲಿನ ತೆರೆದ ಕೊಳವೆ ಬಾವಿಗಳನ್ನು ಮುಚ್ಚುವುದು

1350(918); ಶ್ರೀ ಅಶೋಕ. ಆರ್ (ಪದ್ಮನಾಭ ನಗರ)

ಅ) ರಾಜ್ಯದಲ್ಲಿ ಇತ್ತೀಚೆಗೆ ಕೊಳವೆ ಬಾವಿಗಳನ್ನು ಕೊರೆಸಿ ಅವುಗಳನ್ನು ಮುಚ್ಚದೆ ಇರುವುದರಿಂದ, ಮಕ್ಕಳು ಆ ಕೊಳವೆ ಬಾವಿಗಳಲ್ಲಿ ಬಿದ್ದು, ಪ್ರಾಣ ಕಳೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ನಿಷ್ಕ್ರೀಯ ಕೊಳವೆ ಬಾವಿಗಳಲ್ಲಿ ಇತ್ತೀಚೆಗೆ ಹೆಚ್ಚಾಗಿ ಮಕ್ಕಳು ಬಿದ್ದು ಪ್ರಾಣ ಕಳೆದುಕೊಂಡಿದ್ದು, ಮಕ್ಕಳನ್ನು ಮೇಲೆತ್ತಲು ಸರ್ಕಾರ ಖರ್ಚು ಮಾಡಿರುವ ಹಣವೆಷ್ಟು;